Kyadigere Kavalu area which has been released be granted for gomal for their village;

(*b*) if so, the action taken in that behalf?

A.--Sri Kadidal MANJAPPA(Minister for Revenue).—

(*a*) No.

(*b*) Does not arise.

ಶ್ರೀ ಬಿ. ಎಸ್. ಶಂಕರಪ್ಪ.—(*a*) ಕ್ಲಾಜಿಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಆ ಊರಿನ ಗ್ರಾಮಸ್ಥರು ಹಿಂದಿನ ವ್ಯವಸಾಯ ಮಂತ್ರಿಗಳಿಗೆ ಒಂದು ಅರ್ಜಿ ಕೊಟ್ಟು ಅದರಮೇಲೆ ಅಮಲ್ದಾರರು ಮಹಜರು ಕ್ರಮ ನಡೆಸಿದ್ದುದರ ವರದಿ ತಮಗೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಕೇಳಿದ್ದ ಸರ್ವೆ ನಂಬರ್ ಕಾವಲೇ ಬೇರೆ, ತಾವು ಕೇಳಿರುವ ಕಾವಲೇ ಬೇರೆ.

ಶ್ರೀ ಬಿ. ಎಸ್. ಶಂಕರಪ್ಪ.—ಬರ್ಲಾಳಕೆರೆ ಕಾವಲುಕೊಡಿಸಿ ಎಂದು ಕೇಳಿದ್ದರೆ ಆ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಸರ್ವೆ ಮಾಡಬೇಕು. ಆದ್ದರಿಂದ ಅಂತಿಮ ತೀರ್ಮಾನ ಕೈಕೊಂಡಿಲ್ಲ.

Rules governing Transfer of Non-Gazetted Officers in the State.

**Q.*—258. Sri G. SIVAPPA (Chitradurga).—

Will the Government be pleased to state:—

(*a*) the principles they are adopting while transferring non-gazetted officers in the State;

(*b*) whether it is not a fact that they are being transferred from one corner of the State to the other;

(*c*) whether there is not a tradition or rule that as far as possible they should be kept in their native districts on account of their low salary and emoluments?

A.—Sri B. D. JATTI (Chief Minister).—

(*a*) The general principles are as follows:—

(1) The transfers will be within the district or division according as the cadre is districtwise or divisionwise. In respect of Statewise cadres, transfers may be anywhere within the State.

(2) Where an Officer has to be transferred outside the district or the division as the case may be, it will be effected only when public interest requires it.

(3) A Government servant will not be transferred unless he has been at his place of posting for at least two years and will normally be transferred if he is at a place for three years or more, This restriction will not apply where the posting is made of a Government servant consequent on his obtaining promotion.

(4) Where a transfer in breach of (2) above is necessary, the orders of the next higher authority will be obtained before ordering the transfer.

(5) Non-Ministerial Officers will not normally be posted to their home towns or areas where they own immoveable property. This restriction will not apply to officers having jurisdiction over more than one district.

(6) The transfers will be made as far as possible during those months of the year when the educational institutions have their annual holidays.

(*b*) Such instances have not come to notice.

(*c*) Reference is invited to reply in (*a*) (1), (2) and (5).

ಶ್ರೀ ಜಿ. ಶಿವಪ್ಪ.—(*c*) ಕ್ಲಾಜಿಗೆ ಮಾನ್ಯ ಮಂತ್ರಿಗಳ ಉತ್ತರವೇನು?

ಅಧ್ಯಕ್ಷರು.—ಉತ್ತರ ಕೊಟ್ಟಿದೆ.

ಶ್ರೀ ಜಿ. ಶಿವಪ್ಪ.—ಈಗ ನಾನ್ ಗೆಜೆಟೆಡ್ ಆಫೀಸರುಗಳನ್ನು ಜಿಲ್ಲೆಯಿಂದ ಜಿಲ್ಲೆಗೆ, ಬದರೆಯಿಂದ ಮಂಗಳೂರಿಗೆ ದೂರವಾಗಿ ವರ್ಗಾಯಿಸುವುದರಿಂದ ಕಡಮೆ ಸಂಬಳ ಬರುವವರಿಗೆ ಬಹಳ ತೊಂದರೆಯುಂಟಾಗುತ್ತದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಕಡಮೆ ಸಂಬಳ ಬರುವವರನ್ನು ಹಾಗೆ ವರ್ಗಾಯಿಸುವುದಿಲ್ಲ. ಸಂಬಳ ಹೆಚ್ಚಿಗೆ ಇದ್ದು ಪ್ರಮೋಷ್ಷ ಮೇರೆ ಕಳುಹಿಸುವಾಗ Emotional integration ಆಗಬೇಕೆಂಬ ದೃಷ್ಟಿಯಿಂದ ಹಾಗೆ ಬೇರೆ ಜಿಲ್ಲೆಗಳಿಗೆ ವರ್ಗ ಮಾಡುತ್ತೇವೆ.

ಶ್ರೀ ಜಿ. ಶಿವಪ್ಪ.—ಸಂಬಳ ಕಡಮೆಯಿರುವವರನ್ನು ಹೀಗೆ ದೂರಕ್ಕೆ ವರ್ಗಾಯಿಸುವುದರಿಂದ Emotional Integration ಆಗುವುದರಲ್ಲಿ ಅವರ ಜೀವನವೇ ಉಡುಗಿ ಹೋಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಪ್ರಮೋಷ್ಷ ಮೇಲೆ ಕಳುಹಿಸುವಾಗ ಹಾಗೆ ಹೊರಗೆ ಕಳುಹಿಸುತ್ತೇವೆ, ಅಷ್ಟೆ. ಸ್ವಲ್ಪ ಸಂಬಳವಿರುವವರನ್ನು ಹಾಗೆ ಕಳುಹಿಸುವುದಿಲ್ಲ. ಪ್ರಮೋಷ್ಷ ಆಗಿ ಹೆಚ್ಚಿಗೆ ಸಂಬಳವಾದಾಗ ಕಳುಹಿಸುತ್ತೇವೆ.

Sri M. C. NARASIMHAN.—Is there any difference in the rates of travelling allowance paid on transfer in the different integrating areas?

ಶ್ರೀ ಬಿ. ಡಿ. ಜತ್ತಿ.—ಈಗ ಯೂನಿಫಾರಂ ಆಗಿದೆ. ಅಂಥ ತೊಂದರೆಯೇನೂ ಇಲ್ಲ.

Sri C. K. RAJAIAH SETTY.--In view of the low salary paid to them, is it not desirable to confine the transfers within the same Division ?

(*No. answer*)

ಶ್ರೀ ಎಂ. ಕೆ. ನುರಪುರ.—ಈಗ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ 35 ರೂಪಾಯಿಯ ಸಂಬಳದ ಮೇಲೆ ಅನೇಕರನ್ನು ನೇಮಿಸಿದ್ದೀರಲ್ಲಾ; ಅವರನ್ನು ಹಾಗೆ ವರ್ಗಾಯಿಸುವುದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಕೆಲವು Statewide Department ಗಳಿವೆ. ಅಂಥ ಇಲಾಖೆಗಳಲ್ಲಿ ಅವಶ್ಯಕತೆಯಿದ್ದರೆ ಹಾಗೆ ವರ್ಗಾಯಿಸಬೇಕಾಗುತ್ತದೆ.

ಶ್ರೀ ಟಿ. ಹನುಮಯ್ಯ.—ನಾನ್ ಗೆಜೆಟೆಡ್ ಆಫೀಸರುಗಳು ಕೆಲವರು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ 10-15 ವರ್ಷಗಳಿಂದ ಒಂದೇ ಕಡೆಯಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಕೆಲವುಕಡೆ ಹಾಗಿದೆ. ಅಂಥ ಕಡೆ ಟ್ರಾನ್ಸ್‌ಫರ್ ಮಾಡಬಹುದು.

ಶ್ರೀ ಟಿ. ಹನುಮಯ್ಯ.—ಇವರಗಳು ಹಳ್ಳಿಯವರು ಟೌನಿಗೆ ಬಾರದಂತೆ ಅವರನ್ನು Boycott ಮಾಡುತ್ತಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಬಿ. ಡಿ. ಜತ್ತಿ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಮೂರು ವರ್ಷಕ್ಕೆ ಮೇಲ್ಪಟ್ಟು ಹೀಗೆ ಟ್ರಾನ್ಸಿನಿಲ್ಲರುವವರನ್ನು ಹಳ್ಳಿಗೂ, ಹಳ್ಳಿಯಲ್ಲಿ ಇರುವವರನ್ನು ಟೌನಿಗೂ ವರ್ಗಾಯಿಸುವ ಬಗ್ಗೆ ಅತಿಶೀಘ್ರವಾಗಿ ಕಾರ್ಯಕ್ರಮವನ್ನು ಕೈಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಯೋಚನೆ ಮಾಡುತ್ತೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳನ್ನು ಆರು-ಆರು ತಿಂಗಳಿಗೊಮ್ಮೆ ವರ್ಗಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಆರೀತಿ ಮಾಡಬಾರದು; ಮಾಡಿದ್ದರೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಇದುವರೆಗೂ ಆಗಿರುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಗಮನಕ್ಕೆ ಬಂದಿಲ್ಲ. ಗೊತ್ತಾದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಜ್. ಜಿ. ಓ. ಗಳ ವರ್ಗಾವಣೆಯ ವಿಚಾರದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಕಮಿಟಿಯನ್ನು ಏರ್ಪಾಡು ಮಾಡಿದ್ದಾರೆಂಬುದು ಗೊತ್ತಿದೆಯೇ.

Sri B. D. JATTI.—I will make use of this information.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಆ ರೀತಿ ಒಂದು ಕಮಿಟಿಮಾಡಿಕೊಂಡು ಕೋಲಾರ ಜಿಲ್ಲೆಯಲ್ಲಿ ಕೆಲವು ನಾನ್‌ಗೆಜೆಟೆಡ್ ನೌಕರರುಗಳಿಗೆ ಅನ್ಯಾಯ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri B. D. JATTI.—I do not know. I will enquire into that and set it right.

Sri S. D. GAONKAR.—Will Government consider the question of transferring Marathi speaking Government servants only to Marathi-speaking areas in order to facilitate the education of their children ?

Sri B. D. JATTI.—While transferring them, the difficulties of their children education will be kept in view.

ಶ್ರೀ ಎ. ಮುನಿಯಪ್ಪ.—ನರ್ಮ್‌ಇಲಾಖೆಯಲ್ಲಿ ಆರು ತಿಂಗಳಲ್ಲಿ ನಾಲ್ಕು ಸಾರಿ ವರ್ಗ ಮಾಡಬಹುದೇ ?

ಶ್ರೀ ಬಿ. ಡಿ. ಜತ್ತಿ.—ಹಾಗೆ ಮಾಡಕೂಡದ .

ಶ್ರೀ ಎ. ಮುನಿಯಪ್ಪ.—ಹಾಗೆ ಮಾಡಿದ್ದನ್ನು ತಮ್ಮಗಮನಕ್ಕೆ ತಂದರೆ ಅದನ್ನು cancel ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—Cancel ಮಾಡಿದರೆ ಮತ್ತೆ transfer ಮಾಡಿದಂತಾಗುತ್ತದೆ. ಮುಂದೆಆಗದಂತೆ ನೋಡಿಕೊಳ್ಳುತ್ತೇವೆ.

Membe s' Representat'on.

Sri M. C. NARASIMHAN (Kolar Gol i Fields).–The answers to questions given notice of in 1957-58 may be furnished.

Mr. SPEAKER.—They will be furnished, not as Unstarred, because they do not come under the rules.

Sri C. K. RAJAIAH SETTY.—Can they be treated as Unstarred questions and replies given?

ಅಧ್ಯಕ್ಷರು.—ಅವರು ಉತ್ತರ ಕಳುಹಿಸುತ್ತಾರೆ. ತಾವುಗಳು ಯಾವುದೇ ರೀತಿಯಿಂದ ಅದನ್ನು ಉಪಯೋಗಿಸಿಕೊಳ್ಳಬಹುದು. ಹೊಸರೂಲ್ಸ್ ಪ್ರಕಾರ ಚುಕ್ಕೆ ಗುರುತಿನ ಪ್ರಶ್ನೆಗಳು ಕೆಲವಿವೆ, ಚುಕ್ಕೆ ಗುರುತಿಲ್ಲದ ಕೆಲವು ಪಶ್ನೆಗಳಿವೆ. ಇಲ್ಲಿ ಎಲ್ಲವೂ ಹೊಸರೂಲ್ಸ್ ಪ್ರಕಾರ ಮಾತ್ರ ನಡೆಯುತ್ತದೆ.

MYSORE STATE AID TO INDUSTRIES BILL, 1959.

Presentat'on of Joint Select Committee Report.

Sri T. MARIAPPA (Minister for finance.—I beg to present the report of the Joint Select Committee on the Mysore State Aid to Industries Bill, 1959.

Mr. SPEAKER.—The report is presented.

Members' Representation.

Sri C. M. ARUMUGHAM (Kolar Gold Fileds).—Sir, I wish to know something about the Privilege Motion.....

Mr. SPEAKER.—As regards that motion, I have not as yet come to any